ಅಲ್ಲಲ್ಲಿ ನೋವು ಶಮನಕ್ಕಾಗಿ ಕುಳಿತುಕೊಂಡಿದ್ದ ಹೆಣ್ಣಾಳುಗಳು ಒಬ್ಬೊಬ್ಬರಾಗಿ ಮೇಲೇಳತೊಡಗಿದರು, ಗೂಡೆಗಳನ್ನು ಹಿಡಿದುಕೊಂಡು.

ಯಾರೋ ಇವನ ಕಿವಿಗೆ ಹಾಕಿದ ಸುದ್ದಿ, 'ಜೈಪುರ ಕಾಲಾಕಿಸದಕ್ಕೇನು ಜಾಢ್ಯ ನಿನ್ಗೆ, ಓ ನಾನು ಜೀವನಪರ್ಯಂತ ಯಿಂಗೇ ಇರ್ಬೇಕು, ನೀನ್ ಮಾತ್ರ ಶೋಕಿ ಮಾಡ್ಕಂಡು ಓಡಾಡ್ಕಂಡು ಬರ್ಬೇಕು ಅಂತ ಮಾಡಿದ್ದೀಯೇನು?' ಅಂತ ಮಹಾಂತೇಶ ಭೀಮವ್ವಳನ್ನು ಹಿಗ್ಗಾಮುಗ್ಗ ಜಾಡಿಸಿದ್ದ.

ರಕ್ತ ಒಸರುತ್ತಿದೆ, ಏನಂತ ಹೇಳುವುದು ಇವನಿಗೆ! ಉಸಿರೇ ಇಲ್ಲ, ಮೂಲೆಗೆ ಬಿದ್ದವಳು ಎದ್ದಿದ್ದು ಮರುದಿನ ನಸುಕಿಗೆ. 'ಏನೋ ಪೋಟೊ ಹಿಡೀತಾರಂತೆ, ಬೇಗ ಹರ್ದು' ಅಂತ ಇವಳ ಗೆಳತಿ ಭಾಗ್ಯ ಬಂದು ಎಚ್ಚರಿಸಿದಾಗ ಮುಖ ಕೂಡ ತೊಳೆಯದೆ ಬೈಸಿಕಲ್ ಹತ್ತಿದ್ದು. ರಸ್ತೆಯುದ್ದಕ್ಕೂ ಅದ್ವೇಗೆ ಸೈಕಲ್ಲು ತುಳಿದಳೋ! ಅಲ್ಲಲ್ಲಿ ನಿಲ್ಲಿಸಿ, ಸಾವರಿಸಿಕೊಂಡು ತೋಟ ತಲುಪುವಷ್ಟೊತ್ತಿಗೆ ಬಿಸಿಲು ರಾಚಲಾರಂಭಿಸಿತ್ತು. 'ನೀವು ಇಷ್ಟು ತಡ ಮಾಡಿದ್ರೆ ಆಗಲ್ಲ, ಇನ್ನೇನಾದ್ರೂ

